ರಾಜ್ಯದಲ್ಲಿ ರೈತ ಕಾಯಕ ಕೆರೆ ಯೋಜನೆ

285(324) - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತ ಕಾಯಕ ಕೆರೆ ಯೋಜನೆಯ ಹೂಳು ತೆಗೆಯಲು ಕೈಗೆತ್ತಿ ಕೊಳ್ಳಲಾಗಿರುವ ಕೆರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ಪಡೆದಿರುವ ನೆರವಿನ ಮೊತ್ತ ಎಷ್ಟು; ಯೋಜನೆಯಲ್ಲಿ ರಾಜ್ಯದ ಪಾಲಿನ ಹಣ ಎಷ್ಟು; ಯೋಜನೆಯು ಯಾವ ಹಂತದಲ್ಲಿದೆ;

ಇ) ಯೋಜನೆಯು ಪೂರ್ಣಗೊಳ್ಳಲು ಕಾಲಮಿತಿ ಹಾಕಿಕೊಳ್ಳಲಾಗಿದೆಯೇ;

ಈ) ಈವರೆವಿಗೂ ಈ ಯೋಜನೆಯಡಿ ಎಷ್ಟು ಕೆರೆಗಳ ಹೂಳು ತೆಗೆಯಲಾಗಿದೆ; ಎಷ್ಟು ಕೆರೆಗಳ ಹೂಳು ತೆಗೆಯುವ ಕಾರ್ಯ ಪ್ರಗತಿಯಲ್ಲಿದೆ;

ಉ) ಯೋಜನೆಯನ್ನು ಯಾವ ಇಲಾಖೆಯ ನೆರವಿನೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ರೈತ ಕಾಯಕ ಕೆರೆ ಯೋಜನೆಯಡಿ ಹೂಳು ತೆಗೆಯುವ ಕಾರ್ಯವೂ ಸೇರಿದಂತೆ ಸಮಗ್ರವಾಗಿ ಅಭಿವೃದ್ಧಿ ವಹಿಸಲು ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದರಂತೆ ಒಟ್ಟು 745 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ. ಇದರಲ್ಲಿ ಮೊದಲನೇ ಹಂತದಲ್ಲಿ ಒಟ್ಟು 194 ಕೆರೆಗಳನ್ನು ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ. ಜಿಲ್ಲಾವಾರು ಕೆರೆಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಈ ಯೋಜನೆಗೆ ವಿಶ್ವಬ್ಯಾಂಕಿನಿಂದ ನೆರವನ್ನು ಪಡೆದಿಲ್ಲ. ಸರ್ಕಾರ 745 ಕೆರೆಗಳ ಪುನರುಜ್ಜೀವನಕ್ಕಾಗಿ ರೂ. 195.00 ಕೋಟಿ ಅನುಮೋದನೆ ನೀಡಿರುತ್ತದೆ. 2001-02ನೇ ಸಾಲಿಗಾಗಿ ರೂ. 20.00 ಕೋಟಿ ಒಟ್ಟು 194 ಕೆರೆಗಳನ್ನು ಕೈಗೆತ್ತಿಕೊಳ್ಳಲು ಮೀಸಲಾಗಿರುತ್ತದೆ.

ಇ) ರೈತ ಕಾಯಕಕೆರೆ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಗೆ ತಿಳಿಸಿದಂತೆ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.

ಕಾರ್ಯಕ್ರಮ	ಕಾಲಾವಧಿ
1) ಅರಿವನ್ನು ಸೃಷ್ಟಿಸುವುದು ಮತ್ತು ನೀರು ಬಳಕೆದಾರರ ಸಂಘ ರಚನೆ ಇಲಾಖಾ ಅಧಿಕಾರಿಗಳನ್ನು ಹೊಂದಿ ಕೊಳ್ಳುವಂತೆ ಮಾಡುವುದು	6 ರಿಂದ 9 ತಿಂಗಳು

2) ಅಂದಾಜು ತಯಾರಿಕೆ 3 ತಿಂಗಳು

3) ಯೋಜನೆಯ ಅನುಷ್ಠಾನ 24 ತಿಂಗಳು ಅಂದಾಜು ವೆಚ್ಚವನ್ನು ವನ್ನು ಆಧರಿಸಿದೆ.

ಈ) ಈ ಯೋಜನೆಯಡಿಯಲ್ಲಿ ಕೆರೆಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲಾಗುತ್ತಿದ್ದು, ಪ್ರಾರಂಭಿಕ ಹಂತದಲ್ಲಿದೆ

ಉ) ಈ ಯೋಜನೆಯ ಮೊದಲನೇ ಹಂತದ ಕಾರ್ಯಕ್ರಮ ಕರ್ನಾಟಕ ನೀರಾವರಿ ನಿಗಮ ಮತ್ತು ನಬಾರ್ಡ್ ನೆರವಿನೊಂದಿಗೆ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಅನುಬಂದ

ಜಿಲ್ಲಾವಾರು ಕೆರೆಗಳ ವಿವರ

ಕ್ರಮ ಸಂ.	ಜಿಲ್ಲೆ	ಕಾಮಗಾರಿಯ ಸಂಖ್ಯೆ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು:			
1.	ಶಿವಮೊಗ್ಗ	8	129.65
2.	ಚಾಮರಾಜನಗರ	4	71.62
3.	ದಕ್ಷಿಣ ಕನ್ನಡ	7	43.91
4.	ಉಡುಪಿ	6	58.47
5.	ದಾವಣಗೆರೆ	5	190.60
6.	ಕೊಡಗು	2	19.72
7.	ತುಮಕೂರು	13	279.70
8.	ಚಿತ್ರದುರ್ಗ	7	103.50
9.	ಮಂಡ್ಯ	5	81.83
10.	ಚಿಕ್ಕಮಗಳೂರು	6	71.50
11.	ಕೋಲಾರ	11	198.47
12.	ಬೆಂಗಳೂರು	13	232.20
13.	ಹಾಸನ	8	94.85
14.	ಮೈಸೂರು	7	121.58

ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ

1.	ಬೆಳಗಾಂ	15	278.75
2.	ಧಾರವಾಡ	7	197.00
3.	ಹಾವೇರಿ	6	153.50
4.	ಗದಗ	5	165.00
5.	ಉತ್ತರ ಕನ್ನಡ	6	71.00
6.	ಬಿಜಾಪುರ	8	193.60
7.	ಬಾಗಲಕೋಟೆ	6	136.65
8.	ಗುಲ್ಬರ್ಗಾ	13	316.85
9.	ಬೀದರ್	6	210.10
10.	ಬಳ್ಳಾರಿ	9	151.70
11.	ರಾಯಚೂರು	6	150.00
12.	ಕೊಪ್ಪಳ	5	150.00

ಮಂಡ್ಯ-ಮದ್ದೂರು ತಾಲ್ಲೂಕುಗಳಲ್ಲಿ ಏತ ನೀರಾವರಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ

288(432) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಲ್ಲಿ ಏತ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ (ವಿವರ ನೀಡುವುದು);

ಆ) ಅನುದಾನದ ಕೊರತೆಯಿಂದಾಗಿ ಈ ಕಾಮಗಾರಿಗಳು ತೀವ್ರ ಮಂದಗತಿಯಲ್ಲಿ ನಡೆಯುತ್ತಾ ಇರುವುದನ್ನು ಸರ್ಕಾರ ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಅನುದಾನದ ಕೊರತೆಯ ಸಮಸ್ಯೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನಲ್ಲಿ 3 ಏತ ನೀರಾವರಿ ಯೋಜನೆಗಳು ಹಾಗೂ ಮದ್ದೂರು ತಾಲ್ಲೂಕಿನಲ್ಲಿ 8 ಏತನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ ಮಂಡ್ಯ ತಾಲ್ಲೂಕಿನಲ್ಲಿ ಒಂದು ಹಾಗೂ ಮದ್ದೂರು ತಾಲ್ಲೂಕಿನಲ್ಲಿ 5 ಕಾಮಗಾರಿಗಳು